'ಮಲೇರಿಯ ಮತ್ತಿತರ ಸಣ್ಣ ಕಾಯಿಲೆಗಳನ್ನು ಬಿಟ್ಟರೆ ಅಂತಾ ಗಂಭೀರ ಕಾಯಿಲೆಗಳ್ಯಾವುವೂ ಇಲ್ಲ. ಯಾಕೆ?'

'ಹಾಗಾದ್ರೆ ಸ್ವಲ್ಪ ಹಿಂದಿರುಗಿ ನೋಡು.' ನಾನೆಂದೆ.

ಬಿಲ್ಲ್ ಹಿಂದೆ ತಿರುಗಿದ. ಹುಡುಗನನ್ನು ನೋಡುತ್ತಿದ್ದಂತೆಯೇ ಅವನ ಮುಖ ಬಿಳುಚಿಕೊಂಡಿತು. ಅವನು ಕುಸಿದು ಕುಳಿತ. ಏನು ಮಾಡುವುದೆಂದು ತೋಚದೆ, ನೆಲದ ಮೇಲಿನ ಹುಲ್ಲು ಗರಿಕೆಗಳನ್ನು ಕೀಳತೊಡಗಿದ. ಅವನನ್ನು ಸಮಧಾನಪಡಿಸಿದೆ. ನಮ್ಮ ಯೋಜನೆ ಸಫಲವಾಗುವುದರಲ್ಲಿ ಯಾವುದೇ ಸಂಶಯಗಳಿಲ್ಲ. ಇಂದು ಸಂಜೆಯೊಳಗೆ ನಮಗೆ ಉತ್ತರ ಸಿಗುತ್ತದೆ. ಎಲ್ಲಾ ನಾವಂದುಕೊಂಡಂತೆ ನಡೆದರೆ ಇಂದು ಮಧ್ಯರಾತ್ರಿಯೊಳಗೆ ನಾವು ಈ ಊರನ್ನು ಬಿಡಬಹುದು ಎಂದೆ. ಬಿಲ್ಲ್ ಸಾವಕಾಶವಾಗಿ ಮೊದಲಿನಂತಾದ. ಹುಡುಗನನ್ನು ನೋಡಿ ವಿಚಿತ್ರ ರೀತಿಯಲ್ಲಿ ನಗೆ ಬೀರಿದ.

ವೃತ್ತಿಪರ ಅಪಹರಣಕಾರರಂತೆ, ಸಿಕ್ಕಿ ಬೀಳದಂತೆ ನಾನು ಯೋಜನೆಯನ್ನು ರೂಪಿಸಿದ್ದೆ. ಉತ್ತರಕ್ಕಾಗಿ ಅಥವಾ ಒತ್ತೆ ಹಣ ಪಾವತಿಸಲು ನಾನು ಗುರುತಿಸಿದ್ದ ಮರ ರಸ್ತೆಗೆ ಹೊಂದಿಕೊಂಡೇ ಇತ್ತು. ನಾನು ಕತ್ತಲು ಆವರಿಸುವ ಮೊದಲೇ ಮರವನ್ನೇರಿ ಅಡಗಿ ಕುಳಿತಿದ್ದೆ. ಸರಿಯಾಗಿ ಎಂಟೂವರೆಗೆ ಒಬ್ಬ ಸೈಕಲ್ ಸವಾರನೊಬ್ಬ ಬಂದು ಡಬ್ಬಿಯೊಳಗೆ ಏನೋ ಹಾಕಿ ಹಿಂದಿರುಗಿ ನೋಡದೆ ಹೊರಟುಹೋದ. ನಾನು ಒಂದು ಗಂಟೆ ಕಾದು ಯಾವುದೇ ಅಪಾಯಗಳಿಲ್ಲವೆಂದು ಖಾತ್ರಿಯಾದಂತೆ ಕೆಳಗಿಳಿದು ಬಂದು ಡಬ್ಬಿಯೊಳಗಿಂದ ಒಂದು ಕಾಗದವನ್ನು ಜೇಬಿಗೆ ಹಾಕಿ ಅರ್ಧ ಗಂಟೆಯೊಳಗೆ ಗುಹೆಯನ್ನು ಸೇರಿದೆ. ಮೇಣದ ಬತ್ತಿಯ ಬೆಳಕಿಗೆ ನಾನು ಮತ್ತು ಬಿಲ್ಲ್ ಕುಳಿತೆವು. ನಾನು ಕಾಗದವನ್ನು ಹೊರ ತೆಗೆದೆ. ಅದರಲ್ಲಿ ಮೋಡಿ ಅಕ್ಷರಗಳಲ್ಲಿ ಇಂತೆಂದು ಬರೆಯಲಾಗಿತ್ತು...

## 11

'ಏನೂ ಮಾಡಲು ಹೇಸದ ಇಬ್ಬರಿಗೆ...

ಮಾನ್ಯರೇ, ನಿಮ್ಮ ಪತ್ರದ ಒಕ್ಕಣೆ ತಿಳಿಯಿತು. ನನ್ನ ಮಗನ ಬಿಡುಗಡೆಗೆ ನೀವು ಕೇಳಿರುವ ಹಣ ಓದಿ ನನಗೆ ಎಲ್ಲಿಂದ ನಗಬೇಕೋ ಗೊತ್ತಾಗುತ್ತಿಲ್ಲ! ಹಾಗಾಗಿ ನನ್ನ ಆಲೋಚನೆ ಹೀಗಿದೆ:

ಇನ್ನೂರೈವತ್ತು ಡಾಲರು ಪರಿಹಾರಧನ ಪಾವತಿಸುವುದಾದರೆ ನನ್ನ ಮಗ ಜಾನಿಯನ್ನು ಮನೆಗೆ ಬರಮಾಡಿಕೊಳ್ಳಲು ನಾನು ತಯಾರಾಗಿದ್ದೇನೆ. ನೀವು ಗಾಢ ಅಂಧಕಾರ ಕವಿದ ನಂತರವೇ ಬರುವುದು ಉಚಿತವೆಂದು ನಿಮಗೆ ಎಚ್ಚರಿಸುತ್ತಿದ್ದೇನೆ. ನೆರೆಹೊರೆಯವರೆಲ್ಲಾ ಜಾನಿ ಕಳೆದು ಹೋಗಿದ್ದಾನೆಂದೇ ತಿಳಿದು ತುಂಬಾ ಹರುಷದಿಂದ ಇರುವಾಗ ನೀವು ಹಗಲಿನಲ್ಲೇ ಅವನನ್ನು ಕರೆದುಕೊಂಡು ಬಂದರೆ ನಿಮಗೆ ಏನಾಗಬಹುದೆಂದು ನಾನು ಊಹಿಸಲಾರೆ!

ಗೌರವಾದರಗಳೊಂದಿಗೆ,

ಎಬೆನೆಜರ್ ಡೋರ್ಸೆಟ್.'

ನಾನು ಬಿಲ್ಲನ ಕಡೆಗೆ ನೋಡಿದೆ.

'ಸ್ಯಾಮ್...' ಗೋಗರೆಯುವ ದನಿಯಲ್ಲಿ ಉಲಿದ ಬಿಲ್ಲ್. 'ಹಾಗೆ ನೋಡಿದರೆ ಇನ್ನೂರೈವತ್ತು ಡಾಲರುಗಳು ಜುಜುಬಿ ಎನ್ನಬಹುದೇನೋ! ಇನ್ನೊಂದೇ ದಿನ ನೀನು ನನ್ನನ್ನು ಈ ಜಾನಿಯ ಜತೆ ಬಿಟ್ಟರೆ ನಾನು ಹುಚ್ಚಾಸ್ಪತ್ರೆ ಸೇರುವುದು ಗ್ಯಾರಂಟಿ. ನನಗೆ ಈ ಎಬೆನೆಜರ್ ಇದ್ದಾನಲ್ಲ, ತುಂಬಾ ಒಳ್ಳೆಯ ವ್ಯಕ್ತಿಯಂತೆ ಕಾಣಿಸುತ್ತಾನೆ. ಇಲ್ಲಾಂದ್ರೆ ಇಷ್ಟು ಜುಜುಬಿ ಮೊತ್ತಕ್ಕೆ ಒಪ್ಪಿಕೊಳ್ಳುತ್ತಿದ್ದನೆ?